



ಅರುಣ ಪಿ. ಭಟ್ಟ

# ವಾರಭವಿಷ್ಯ 26.11.2020ರಿಂದ 2.12.2020ರವರೆಗೆ



**ಮೇಷ**

ಕುಟುಂಬ ಸದಸ್ಯರ ಜತೆಗೆ ಮಾತನಾಡುವಾಗ ಎಚ್ಚರಿಕೆಯಿಂದ ಇರಬೇಕು. ಸಿಟ್ಟಿನ ಕೈಗೆ ಬುದ್ಧಿಕೊಟ್ಟರೆ ನಂತರ ಪರಿತಪಿಸುವಂತಾಗುತ್ತದೆ. ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಇರುವವರಿಗೆ ಪ್ರಗತಿ ಇದೆ. ಹೊಸ ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರಿಗೆ ನಿರೀಕ್ಷಿತ ಯಶಸ್ಸು ದೊರೆಯುವ ಸಾಧ್ಯತೆ ಹೆಚ್ಚಿದೆ. ಹಣದ ಆದಾಯ ಹೆಚ್ಚುವ ಅವಕಾಶ ವಿಪುಲವಾಗಿದೆ. ಶುಭದಿನ 29. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.



**ವೃಷಭ**

ವ್ಯವಹಾರ ಮಾಡುವವರಿಗೆ ಈ ವಾರ ಸೂಕ್ತ. ಒಂದು ವೇಳೆ ಪಿತ್ರಾರ್ಜಿತ ಆಸ್ತಿ ವಿಚಾರವಾಗಿ ವ್ಯಾಜ್ಯಗಳು ಇದ್ದಲ್ಲಿ ನಿರೀಕ್ಷಿತ ಫಲಿತಾಂಶ ಪಡೆಯಲಿದ್ದೀರಿ. ಕೌಟುಂಬಿಕ ಜೀವನ ಶಾಂತಯುತವಾಗಿ ಇರುತ್ತದೆ. ಕಾನೂನು ವಿಚಾರಗಳಲ್ಲಿ ಅದೃಷ್ಟ ನಿಮ್ಮ ಕಡೆಗೆ ಇರುತ್ತದೆ. ಆರೋಗ್ಯದಲ್ಲಿನ ಏರು ಪೇರು ಸ್ವಲ್ಪ ಮಟ್ಟಿಗೆ ಚಿಂತೆಗೆ ಕಾರಣವಾಗುತ್ತದೆ. ಶುಭದಿನ 1. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ



**ಮಿಥುನ**

ವಾರದ ಆರಂಭದಲ್ಲಿ ಶುಭ ವಾರ್ತೆ ಕೇಳುವ ಯೋಗ ಇದೆ. ಆರೋಗ್ಯ ಚೆನ್ನಾಗಿರುತ್ತದೆ. ಉತ್ಸಾಹದಿಂದ ಕಾಣಿಸಿಕೊಳ್ಳುತ್ತೀರಿ. ಬಹಳ ಕಾಲದಿಂದ ಕಾಡುತ್ತಿದ್ದ ಅನಾರೋಗ್ಯ ಸಮಸ್ಯೆಗಳು ನಿವಾರಣೆ ಆಗುತ್ತವೆ. ಇನ್ನು ದೈನಂದಿನ ವ್ಯವಹಾರಗಳಲ್ಲಿ ಶಿಸ್ತು ರೂಢಿ ಮಾಡಿಕೊಳ್ಳಲಿದ್ದೀರಿ. ಯಾವುದೇ ಸನ್ನಿವೇಶವನ್ನು ತಾಳ್ಮೆಯಿಂದ ನಿಭಾಯಿಸಿ. ಶುಭದಿನ 2. ವಿಷ್ಣು ಸಹಸ್ರನಾಮ ಪಠಿಸಿರಿ.



**ಕಟಕ**

ಕಾನೂನು ವ್ಯಾಜ್ಯಗಳಿದ್ದಲ್ಲಿ ನಿಮ್ಮ ಪರವಾಗಿ ಆಗಬಹುದು. ಸ್ಪರ್ಧೆಗಳಲ್ಲಿ ಭಾಗವಹಿಸುವವರಿಗೆ ಯಶಸ್ಸು ಪಡೆಯುವ ಸಾಧ್ಯತೆ ಹೆಚ್ಚಿದೆ. ನೀವು ಅದಕ್ಕಾಗಿ ನಡೆಸಿದ ತಯಾರಿಗೆ ಮೆಚ್ಚುಗೆಯ ಮಾತುಗಳನ್ನು ಕೇಳುತ್ತೀರಿ. ವಾರದ ಆರಂಭದಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ನೀಡಬೇಕು. ಆದರೆ ಕ್ರಮೇಣ ಆರೋಗ್ಯ ಸುಧಾರಿಸುತ್ತಾ ಬರುತ್ತದೆ. ವೃತ್ತಿಪರರಿಗೆ ಏಳ್ಗೆ ಇದೆ. ಶುಭದಿನ 30. ಆಂಜನೇಯ ಸ್ತೋತ್ರ ಪಠಿಸಿರಿ.



**ಸಿಂಹ**

ನಿಮ್ಮ ಹಣಕಾಸು ಸ್ಥಿತಿ ಉತ್ತಮ ಮಾಡಿಕೊಳ್ಳಲು ಹಲವು ಹೊಸ ಅವಕಾಶಗಳು ನಿಮಗೆ ದೊರೆಯಲಿವೆ. ಉದ್ಯೋಗಸ್ಥರಿಗೆ ಪರ್ಯಾಯ ಅವಕಾಶಗಳು ದೊರೆಯಲಿವೆ. ಈ ಹಿಂದೆ ಭಿನ್ನಾಭಿಪ್ರಾಯಗಳು ಇದ್ದಲ್ಲಿ ಅವುಗಳು ನಿವಾರಣೆ ಆಗುತ್ತವೆ. ಪ್ರೀತಿಪಾತ್ರರ ಜತೆ ಪ್ರವಾಸ ಮತ್ತು ಶಾಪಿಂಗ್ ಮಾಡಲಿದ್ದೀರಿ. ವಾರಾಂತ್ಯವು ಸಂತೋಷದಾಯಕವಾಗಿ ಇರುತ್ತದೆ. ಶುಭದಿನ 2. ಸೌಂದರ್ಯ ಲಹರಿ ಪಠಿಸಿರಿ.



**ಕನ್ಯಾ**

ನಿಮ್ಮ ಜತೆಗಿರುವವರು ಕೆಲಸದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ. ಉದ್ಯೋಗ ಬದಲಾವಣೆಗೆ ಯತ್ನಿಸುತ್ತಿರುವವರು ಅದಕ್ಕಾಗಿ ಇನ್ನೂ ಹೆಚ್ಚಿನ ಶ್ರಮ ಹಾಕಬೇಕು. ವಾರದ ಮಧ್ಯ ಭಾಗದಲ್ಲಿ ಹಣಕಾಸಿನ ಅನುಕೂಲ ಒದಗಿಬರಲಿದೆ. ಪ್ರೀತಿ ಪ್ರೇಮ ಸಂಬಂಧದಲ್ಲಿ ಇರುವವರು ಸುಮಧುರವಾದ ಸಮಯವನ್ನು ಕಳೆಯಲಿದ್ದೀರಿ. ಶುಭದಿನ 1. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.



**ತುಲಾ**

ವಾರದ ಆರಂಭದಲ್ಲಿ ಪ್ರಗತಿ ಬರಲಿದೆ. ನಿಮ್ಮ ಶ್ರಮವೇ ಗುರಿಯನ್ನು ನಿರ್ಧಾರ ಮಾಡುತ್ತದೆ. ಮೇಲಧಿಕಾರಿಗಳ ಜತೆಗೆ ಉತ್ತಮ ಬಾಂಧವ್ಯ ಏರ್ಪಡುತ್ತದೆ. ಧಾರ್ಮಿಕ ಆರಾಧನೆ ನಿಗದಿ ಆಗಲಿದೆ. ವಾರದ ಮಧ್ಯದಲ್ಲಿ ಆರೋಗ್ಯ ಉತ್ತಮವಾಗಿರುತ್ತದೆ. ಇದಕ್ಕಾಗಿ ಸಾಲ ಮಾಡುವ ಸಾಧ್ಯತೆಗಳಿವೆ. ಖರ್ಚು ಮಾಡುವ ಮುನ್ನ ಅದರ ಅಗತ್ಯ ಇದೆಯಾ ಎಂಬ ಬಗ್ಗೆ ಆಲೋಚಿಸಿ. ಶುಭದಿನ 29. ಹನುಮಾನ್ ಚಾಲಿಸ್ ಪಠಿಸಿರಿ.



**ವೃಶ್ಚಿಕ**

ದೂರ ಪ್ರಯಾಣ ಮಾಡಬೇಕಾದ ಸನ್ನಿವೇಶ ಎದುರಾಗುತ್ತದೆ. ಸಂಬಂಧ ಸುಧಾರಣೆ, ವೃತ್ತಿ ಬದುಕಿನ ಏಳ್ಗೆಗೆ ಅವಕಾಶ ದೊರೆಯುತ್ತದೆ. ಪ್ರತಿಸ್ಪರ್ಧಿಗಳನ್ನು ಎದುರಿಸಲು ಈ ಹಿಂದಿಗಿಂತ ನಿಮ್ಮ ಸಾಮರ್ಥ್ಯ ಹೆಚ್ಚಾಗಲಿದೆ. ಬಹಳ ಕಾಲದಿಂದ ಬಾಕಿ ಉಳಿದಿದ್ದ ಯೋಜನೆಗಳನ್ನು ಪೂರ್ಣಗೊಳಿಸಲಿದ್ದೀರಿ. ಸರ್ಕಾರಿ ಸೇವೆಯಲ್ಲಿ ಇರುವವರಿಗೆ ಅನುಕೂಲಗಳಿವೆ. ಶುಭದಿನ 2. ಈಶ್ವರನಿಗೆ ರುದ್ರಾಭಿಷೇಕ ಮಾಡಿಸಿ.



**ಧನಸ್ಸು**

ವಾರದ ಆರಂಭದಲ್ಲಿ ಅತ್ಯುತ್ತಮವಾದ ಸಮಯ ಇದೆ. ಆರೋಗ್ಯ ಉತ್ತಮವಾಗಿರುತ್ತದೆ. ಹಳೆ ಕಾಯಿಲೆಗಳು ಇದ್ದಲ್ಲಿ ವಾಸಿಯಾಗುತ್ತವೆ. ಈ ಮೂಲಕ ಶಿಸ್ತುಬದ್ಧ ಜೀವನಕ್ಕೆ ಒಗ್ಗಿಕೊಳ್ಳುತ್ತೀರಿ. ಕಾನೂನು ವ್ಯಾಜ್ಯಗಳಲ್ಲಿ ವಿರೋಧಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಅವರು ನಿಮಗಿಂತ ಶಕ್ತಿಶಾಲಿಗಳಾಗಲಿದ್ದಾರೆ. ವಿಶ್ರಾಂತಿಗಾಗಿ ಪ್ರಯಾಣ ಮಾಡಬಹುದು. ಶುಭದಿನ 27. ಗಣಪತಿಗೆ ದೂರ್ವಾರ್ಚನೆ ಮಾಡಿರಿ.



**ಮಕರ**

ವಾರದ ಆರಂಭದಲ್ಲಿ ಪ್ರಗತಿಗೆ ಆಯ್ಕೆಗಳು ದೊರೆಯುತ್ತವೆ. ದೊಡ್ಡ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಆಸೆ ಪೂರೈಸುತ್ತದೆ. ಸೋಂಕು, ಅಲರ್ಜಿ ಸಮಸ್ಯೆ ಇರುವವರು ಬಹಳ ಎಚ್ಚರಿಕೆಯಿಂದ ಇರಬೇಕು. ವಾರದ ಮಧ್ಯಭಾಗದ ತನಕ ಕಾಡಬಹುದು. ಸಂಗಾತಿ ಜತೆಗೆ ಸಂತಸದ ಸಮಯ ಕಳೆಯಲಿದ್ದೀರಿ. ಸಣ್ಣ ಪುಟ್ಟ ವಿಷಯಗಳ ಬಗ್ಗೆ ನಿರ್ಲಕ್ಷ್ಯ ಮಾಡಬೇಡಿ. ಶುಭದಿನ 30. ರಾಘವೇಂದ್ರ ಸ್ವಾಮಿ ಆರಾಧನೆ ಮಾಡಿರಿ.



**ಕುಂಭ**

ಹಿರಿಯ ಅಧಿಕಾರಿಗಳ ಸಹಾಯದಿಂದ ನಿಮ್ಮ ಕೌಶಲವನ್ನು ಹೆಚ್ಚು ಮಾಡಿಕೊಳ್ಳುತ್ತೀರಿ. ವಾರದ ಆರಂಭದಲ್ಲಿ ಮಕ್ಕಳಿಂದ ನಿಮಗೆ ಶುಭ ಸುದ್ದಿ ಇದೆ. ಅವರಿಂದ ನೀವು ಹೆಮ್ಮೆಪಡುತ್ತೀರಿ. ವಿವಿಧ ಮೂಲಗಳಿಂದ ಸಂಪತ್ತು ಸಂಗ್ರಹ ಆಗುತ್ತದೆ. ಅದಕ್ಕೆ ತಕ್ಕಂತೆ ನಿಮ್ಮ ಬಜೆಟನ್ನು ಯೋಜನೆ ರೂಪಿಸಿಕೊಳ್ಳಬಹುದು. ವೈಯಕ್ತಿಕ ಸಂಬಂಧವು ಸೌಹಾರ್ದಯುತವಾಗಿ ಇರುತ್ತದೆ. ಶುಭದಿನ 2. ಗೋಪೂಜೆ ಮಾಡಿ. ಶಿವಕವಚ ಪಠಿಸಿರಿ.



**ಮೀನ**

ಈ ವಾರ ವೈಯಕ್ತಿಕ ಹಾಗೂ ಮಹತ್ತರವಾದ ಪ್ರಗತಿ ಕಾಣುವ ಯೋಗ ಇದೆ. ಇಂಟರವ್ಯೂಗಳಲ್ಲಿ ಭಾಗವಹಿಸುವವರು ಅನುಕೂಲಕರ ಫಲಿತಾಂಶ ನಿರೀಕ್ಷಿಸಬಹುದು. ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡಲಿದ್ದೀರಿ. ವೈದ್ಯಕೀಯ, ಕಲೆ ಈ ರೀತಿಯ ವೃತ್ತಿಯಲಿ ಇರುವವರಿಗೆ ಅತ್ಯುತ್ತಮವಾದ ಲಾಭ ಸಣ್ಣ ಪುಟ್ಟ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಶುಭದಿನ 1. ದೇವ್ಯಪರಾದ ಕ್ಷಪಾಪನಾ ಸ್ತೋತ್ರ ಪಠಿಸಿರಿ.